**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ.249/2017**

| | | |
|---|---|---|
| ಹೆಸರು | ಲಕ್ಷ್ಮೀಪತಿ ನಾಯಕ್ | ಪಿಡಬ್ಲ್ಯೂ –1 |
| ತಂದೆಯ ಹೆಸರು | ರಾಮಪ್ಪ | |
| ವಯಸ್ಸು | 62 ವರ್ಷ | |
| ಉದ್ಯೋಗ | ನಿವೃತ್ತ ರೈಲ್ವೆಮ್ಯಾನೇಜರ್ | ದಿ: 21.10.2022 |
| ವಾಸ ಸ್ಥಳ | ದಾವಣಗೆರೆ | |
| ಮುಖ್ಯ ವಿಚಾರಣೆ | ಪಿರ್ಯಾದಿ ಪರ ಶ್ರೀ ಇ.ಎಮ್.ವಕೀಲರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ನನ್ನ ಪಿರ್ಯಾದಿಯಲ್ಲಿ ಹೇಳಿರುವ ಘಟನೆಯ ಬಗ್ಗೆ ನನಗೆ ಗೊತ್ತಿರುತ್ತದೆ . 1 ನೇ ಆರೋಪಿಗೆ 4 ನೇ ಆರೋಪಿ ತಮ್ಮನಾಗಬೇಕು. 2 ನೇ ಆರೋಪಿ 1 ನೇ ಆರೋಪಿಯ ತಂಗಿಯ ಗಂಡ. 3 ನೇ ಆರೋಪಿ 2 ನೇ ಆರೋಪಿಯ ತಮ್ಮ. 5 ಮತ್ತು 6 ನೇ ಆರೋಪಿತರು 1 ನೇ ಆರೋಪಿಯ ಗೆಳೆಯರು. 7 ನೇ ಆರೋಪಿ ಕರ್ನಾಟಕ ಬ್ಯಾಂಕ್ , ಹರಿಹರದ ಮ್ಯಾನೇಜರ್. 1 ನೇ ಆರೋಪಿ ಹರಿಹರ ಪಟ್ಟಣದ ಕೇಶವನಗರದಲ್ಲಿ ಬಡ್ಡಿ ವ್ಯವಹಾರ ಮಾಡಿಕೊಂಡು ವಾಸವಾಗಿದ್ದಾರೆ. ಸದರಿ 1 ನೇ ಆರೋಪಿ ಸರ್ಕಾರದಿಂದ ಯಾವುದೇ ಪರವಾನಗಿ ಪಡೆಯದೇ ಅಕ್ರಮವಾಗಿ ಬಡ್ಡಿ ವ್ಯವಹಾರ ನಡೆಸುತ್ತಿದ್ದಾರೆ. 1 ನೇ ಆರೋಪಿ ತಂದೆ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಅವರು ಈಗ 4 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಅವರ ಹೆಸರು ಸಿ.ನಾರಾಯಣಪ್ಪ ಅಂತಾ ಇರುತ್ತದೆ. ಸದರಿ ಸಿ.ನಾರಾಯಣಪ್ಪ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರ ಮಗ 1 ನೇ ಆರೋಪಿ ನನಗೆ ಪರಿಚಯವಾಗಿರುತ್ತಾನೆ. 1 ನೇ ಆರೋಪಿಯ ಜೊತೆ ನಾನು ಹಣಕಾಸಿನ ವ್ಯವಹಾರ ಮಾಡುತ್ತಿದ್ದೆನು. 1 ನೇ ಆರೋಪಿ ನನಗೆ ಸಾಲ ಕೊಡಿಸುತ್ತೇನೆ ಎಂದು ಹರಿಹರ ಪಟ್ಟಣದಲ್ಲಿರುವ ಕರ್ನಾಟಕ ಬ್ಯಾಂಕ್ ಶಾಖೆಯ ಮ್ಯಾನೇಜರ್ ಆದ 7 ನೇ ಆರೋಪಿಯನ್ನು ಪರಿಚಯ ಮಾಡಿಸಿರುತ್ತಾನೆ. ಎಲ್ಲಾ ಸಾಲದ ಪತ್ರಗಳು 1 ನೇ ಆರೋಪಿಯ ಮನೆಯಲ್ಲಿಟ್ಟುಕೊಂಡಿದ್ದು, ನನ್ನನ್ನು ಕರೆಯಿಸಿ ಸಾಲದ ಪತ್ರಗಳಿಗೆ ಸಹಿ ಪಡೆದುಕೊಂಡಿದ್ದು, ಅಲ್ಲದೇ ಸಾಕ್ಷಿದಾರರನ್ನು ಸಹ 1 ನೇ ಆರೋಪಿ ತನ್ನ ಮನೆಗೆ ಕರೆಸಿಕೊಂಡು ಸಹಿ ಮಾಡಿಸಿಕೊಂಡಿರುತ್ತಾನೆ. ಬ್ಯಾಂಕಿನ ದಾಖಲಾತಿಗಳ ಪೈಕಿ ಅಂಡರ್ ಟೇಕಿಂಗ್ ಮೆಮೂಗೂ ಸಹ 1 ನೇ ಆರೋಪಿ ತನ್ನ ಮನೆಯಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾನೆ. ನಂತರ ನನ್ನನ್ನು 1 ನೇ ಆರೋಪಿ ಬ್ಯಾಂಕ್ ಗೆ ಕರೆದುಕೊಂಡು ಹೋಗಿದ್ದು, ನನ್ನ ಸಂಬಳದ ಮೇಲೆ ಚಾರ್ಜ ಕ್ರಿಯೇಟ್ ಆದ ನಂತರ ನಿಮಗೆ ಸಾಲ ಕೊಡಲಾಗುತ್ತದೆ ಎಂದು 7 ನೇ ಆರೋಪ ಹೇಳಿರುತ್ತಾನೆ. ನನ್ನ ಸಂಬಳದ ಮೇಲೆ ಚಾರ್ಜ ಕ್ರಿಯೇಟ್ ಆದ ನಂತರ ನಾನು ಬ್ಯಾಂಕ್ ಗೆ ಸಾಲವನ್ನು ಕೇಳಲು

ಹೋಗಿರುತ್ತೇನೆ. ನನ್ನ ಸಂಬಳದ ಮೇಲೆ ತಿಂಗಳಿಗೆ ರೂ 5,054/- ರಂತೆ ನನ್ನ ಖಾತೆಗೆ ಕರ್ನಾಟಕ ಬ್ಯಾಂಕ್ ನ ಚಾರ್ಜ ಕ್ರಿಯೇಟ್ ಆಗಿತ್ತು . 7 ನೇ ಆರೋಪಿ ನನ್ನ ಖಾತೆಗೆ ಸಾಲ ಮಂಜೂರಾತಿ ಮಾಡಿದ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡದೇ , 1 ನೇ ಆರೋಪಿ ನನ್ನ ಖಾತೆಯಿಂದ ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ. ಸಾಲ ಮಂಜೂರಾಗುವುದಕ್ಕಿಂತ ಮುಂಚೆ 1 ನೇ ಆರೋಪಿ ನನ್ನಿಂದ ಖಾಲಿ ಸಹಿ ಮಾಡಿದ ಚೆಕ್ಕುಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ಉಪಯೋಗಿಸಿ ಸಾಲ ಮಂಜೂರಾದ ಹಣವನ್ನು ಡ್ರಾ ಮಾಡಿಕೊಂಡಿರುತ್ತಾನೆ. ನಾನು 7 ನೇ ಆರೋಪಿಯ ಬ್ಯಾಂಕ್ ಗೆ ಕರ್ತವ್ಯದ ಸಮಯದಲ್ಲಿ ಹೋಗಿ ನನ್ನ ಸಾಲದ ಬಗ್ಗೆ ವಿಚಾರಿಸಿದಾಗ ಈಗಾಗಲೇ ನಿನಗೆ ಸಾಲ ಮಂಜೂರಾತಿ ಮಾಡಿದ್ದು, 2 ನೇ ಆರೋಪಿ ನಿಮ್ಮ ಚೆಕ್ ಮುಖಾಂತರ ಹಣವನ್ನು ಡ್ರಾ ಮಾಡಿಕೊಂಡು ಹೋಗಿದ್ದಾನೆ ಎಂದು ತಿಳಿಸಿರುತ್ತಾನೆ. 1 ನೇ ಆರೋಪಿ 2 ನೇ ಆರೋಪಿ ಮುಖಾಂತರ ನನ್ನ ಚೆಕ್ ಅನ್ನು ಉಪಯೋಗಿಸಿಕೊಂಡು ಹಣ ಡ್ರಾ ಮಾಡಿದ ಬಗ್ಗೆ ಗೊತ್ತಾಗಿರುತ್ತದೆ. ಈ ಬಗ್ಗೆ ನಾನು 1 ನೇ ಆರೋಪಿಗೆ ವಿಚಾರಿಸಿದಾಗ ನೀವು ಯಾರ ಹತ್ತಿರ ಹೋಗಿ ಕಂಪ್ಲೆಂಟ್ ಕೊಡುತ್ತೀರಿ ಕೊಡಿ ನಾನು ನೋಡಿಕೊಳ್ಳುತ್ತೇನೆ ಎಂದು ದಬ್ಬಾಳಿಕೆ ಮಾಡಿರುತ್ತಾನೆ. ನಂತರ ನಾನು 1 ನೇ ಆರೋಪಿ ನನಗೆ ಮೋಸ ಮಾಡಿ ನನ್ನಿಂದ ಖಾಲಿ ಸಹಿ ಮಾಡಿದ ಚೆಕ್ಕುಗಳನ್ನು ಸಾಲ ಕೊಡಿಸುತ್ತೇನೆ ಎಂದು ಪಡೆದುಕೊಂಡು ಮೋಸದಿಂದ ನನಗೆ ಸಾಲ ಮಂಜೂರಾತಿ ಮಾಡಿಸಿ ಸದರಿ ಹಣವನ್ನು ಡ್ರಾ ಮಾಡಿಕೊಂಡ ಬಗ್ಗೆ ನಾನು ದಾವಣಗೆರೆ ಎಸ್.ಪಿ., ಯವರಿಗೆ 1 ನೇ ಆರೋಪಿ ವಿರುದ್ಧ ದೂರು ಕೊಟ್ಟಿರುತ್ತೇನೆ. ದಾವಣಗೆರೆಯ ಎಸ್.ಪಿ., ಯವರು 1 ನೇ ಆರೋಪಿ ಹಾಗೂ ಆತನ ತಮ್ಮ 4 ನೇ ಆರೋಪಿ ಹಾಗೂ ಅವರ ತಂದೆಯನ್ನು ಕರೆಯಿಸಿ ವಿಚಾರಣೆ ಮಾಡಿ ಅವರನ್ನು ಕಳುಹಿಸಿ ಕೊಟ್ಟಿರುತ್ತಾರೆ. ಸದರಿ ನಾನು 1 ನೇ ಆರೋಪಿ ವಿರುದ್ಧ ದೂರು ಕೊಟ್ಟ ವಿಷಯವನ್ನು ಮುಂದಿಟ್ಟುಕೊಂಡು ದ್ವೇಷದಿಂದ ನನ್ನ ಕಡೆಯಿಂದ ಪಡೆದ ಖಾಲಿ ಸಹಿ ಮಾಡಿದ ಚೆಕ್ಕುಗಳನ್ನು ಉಪಯೋಗಿಸಿಕೊಂಡು 4 ರಿಂದ 6 ನೇ ಆರೋಪಿತರ ಮುಖಾಂತರ ನನ್ನ ವಿರುದ್ಧ ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿರುತ್ತಾನೆ. ಅದೇ ರೀತಿ 1 ನೇ ಆರೋಪಿ ಧಾರವಾಡ, ಭದ್ರಾವತಿ, ತರೀಕೇರೆ ನ್ಯಾಯಾಲಯಗಳಲ್ಲಿ ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿರುತ್ತಾನೆ. 1 ನೇ ಆರೋಪಿಯ ಚಿಕ್ಕಮ್ಮನ ಮಗನಾದ ಗೋಪಾಲಕೃಷ್ಣನ ಮುಖಾಂತರ ಭದ್ರಾವತಿಯಲ್ಲಿ ರೂ.80,000/- ಗಳಿಗೆ , ಗೋಪಾಲಕೃಷ್ಣನ ಹೆಂಡತಿ ಶ್ರೀಮತಿ ಕುವಾರಿಯವರ ಮುಖಾಂತರ ತರೀಕೆರೆಯಲ್ಲಿ ರೂ.1,10,000/- ಗಳಿಗೆ ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿರುತ್ತಾನೆ. ತರೀಕೆರೆ ನ್ಯಾಯಾಲಯದ್ಲಿ ಶ್ರೀಮತಿ ಕುಮಾರಿಯವರ ಮುಖಾಂತರ ದಾಖಲಿಸಿದ ಪ್ರಕರಣದಲ್ಲಿ ನನ್ನನ್ನು ನಿರಪರಾಧಿ ಎಂದು ಖುಲಾಸೆಗೊಳಿಸಿರುತ್ತಾರೆ. ಭದ್ರಾವತಿ ಮತ್ತು ಹರಿಹರ ನ್ಯಾಯಾಲಯಗಳಲ್ಲಿ ದಾಖಲಿಸಿದ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನನ್ನನ್ನು ಅಪರಾಧಿ ಎಂದು ತೀರ್ಮಾನಿಸಿದ್ದು, ನಾನು ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಚಾಲ್ತಿಯಲ್ಲಿರುತ್ತವೆ.

ನಾನು 1 ನೇ ಆರೋಪಿಯ ಮೇಲೆ ಎಸ್,ಪಿ.,ಯವರಿಗೆ ದೂರು ಮಾಡಿದ್ದು ಗೊತ್ತಾಗಿ ನನ್ನಂತೆ ಉಳಿದ ರೈಲ್ವೆಸಿಬ್ಬಂದಿಗಳು 1 ನೇ ಆರೋಪಿ ಅವರಿಗೂ ಸಹ ನನ್ನಂತೆ ಮೋಸ ಮಾಡಿರುವ ಕುರಿತು ಎಸ್.ಪಿ., ದಾವಣಗೆರೆ ರವರಿಗೆ ಆರೋಪಿ ವಿರುದ್ಧ ದೂರನ್ನು ಕೊಟ್ಟಿರುತ್ತಾರೆ. ಅದೇ ರೀತಿ ಹರಿಹರದ ಪೋಲಿಸ್ ಠಾಣೆಯಲ್ಲಿಯೂ ಸಹ 1 ನೇ ಆರೋಪಿ ವಿರುದ್ಧ ದೂರು ಕೊಟ್ಟಿರುತ್ತಾರೆ.

1 ನೇ ಆರೋಪಿ ಅಕ್ರಮಮಾಗಿ ನಮಗೆ ಮೋಸ ಮಾಡಿ ಹಣ ಸಂಪಾದಿಸಿದ ಬಗ್ಗೆ ನಾನು ದಾವಣಗೆರೆಯ ಆದಾಯ ತೆರಿಗೆ ಕಛೇರಿಯಲ್ಲಿಯೂ ಸಹ ಆತನ ವಿರುದ್ಧ ದೂರು ಕೊಟ್ಟಿರುತ್ತೇನೆ. ಅದೇ ರೀತಿ ಬೆಂಗಳೂರು ಲೋಕಾಯುಕ್ತದಲ್ಲಿಯೂ ಸಹ ದೂರು ನೀಡಿರುತ್ತೇನೆ.

ಈಗಾಗಲೇ ನನ್ನ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವ ಸಮಯದಲ್ಲಿ ನಿಶಾನೆಗೊಂಡ ನಿಸಿ –1 ರಿಂದ ನಿಸಿ –7 ರ ದಾಖಲೆಗಳನ್ನು ನನ್ನ ಮುಖ್ಯ ವಿಚಾರಣೆಯ ಭಾಗವನ್ನಾಗಿ ಪರಿಗಣಿಸಲು ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಾರ್ಥನೆ ಮೇರೆಗೆ ಅಳವಡಿಸಿಕೊಳ್ಳಲಾಯಿತು.

(ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಇನ್ನೂ ಕೆಲವು ದಾಖಲೆಗಳನಳ್ಳು ಹಾಜರುಪಡಿಸಲು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರುತ್ತಿದ್ದು, ಮಂಜೂರು ಮಾಡಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.